ಶ್ರೀ ಗುರು ಸಾರ್ವಭೌಮ ಮಂತ್ರಾಲಯ ಪ್ರಭುಗಳು ರಚಿಸಿದ

"ಗೀತಾ ವಿವೃತ್ತಿ"

ಮಂತ್ರಾಲಯ ಶ್ರೀಗುರುಸಾರ್ವಭೌಮ ರಾಘವೇಂದ್ರರ ವ್ಯಕ್ತಿತ್ವ ಸರ್ವತೋಮುಖವಾದದ್ದು. ಅವರು ಜ್ಞಾನ, ಭಕ್ತಿ, ವೈರಾಗ್ಯ ಸಂಪನ್ನರು, ಯೋಗಿಗಳು, ಆಗಮ್ಯ ಮಹಿಮರು, ಪಾಠ ಪ್ರವಚನ ರೂಪ ವಾಗ್ಗಾಂಗೆಯನ್ನು ಪ್ರವಹಿಸಿದವರು, ಪ್ರತಿವಾದಿಗಳಿಗೆ ಮೂಕೀಭಾವ ಐದಿಸಬಲ್ಲವರು, ಸರ್ವವಿದ್ಯಾ ಪ್ರವೀಣರು, ಅಪೇಕ್ಷಿತ ಪ್ರದಾತರು ಮತ್ತು ಅದ್ವಿತೀಯ ಗ್ರಂಥಕರ್ತರೂ ಆಗಿದ್ದರು. ಅವರು ಆಗಿದ್ದರು, ಈಗಿಲ್ಲವೆನ್ನುವ ಹಾಗಿಲ್ಲ. ಮಾನವ ದೃಗ್ಗೋಚರರಲ್ಲದಿದ್ದರೂ ಮಂತ್ರಾಲಯದಲ್ಲಿದ್ದಾರೆ. ಆಹ್ವಾನಿಸಿದ ಗ್ರಾಮ, ನಗರಗಳಿಗೆಲ್ಲ ಹೋಗಿ ಸಂಭ್ರಮದಿಂದ ಬೃಂದಾವನಗಳಲ್ಲಿ ಅದೃಶ್ಯರಾಗಿ ಯೋಗಲಬ್ಧ ಸಾಮರ್ಥ್ಯದಿಂದ ವಿರಾಜಮಾನರಾಗಿದ್ದಾರೆ. ಭಕ್ತಾನುಕಂಪಿಗಳಾಗಿ ಅಸಂಖ್ಯಾತ ಭಕ್ತರುಗಳ ಅಭೀಷ್ಟವನ್ನು ನೆರೆವೇರಿಸುತ್ತಿದ್ದಾರೆ. ಜನಸಾಮಾನ್ಯರ ಮನದಲ್ಲಿ ನೆಲೆಸಿದ್ದಾರೆ. ನಂಬಿದವರಿಗೆ ಇವರೊಂದು ದೊಡ್ಡ ಆಸರೆ. ಜಿಜ್ಞಾಸುಗಳಿಗಂತೂ ಅನೇಕ ಉತ್ತಮ ಲಿಖಿತ ಗ್ರಂಥಗಳನ್ನು ರಚನೆ ಮಾಡಿಕೊಟ್ಟು ಮೋಕ್ಷ ಮಾರ್ಗದಲ್ಲಿ ಜ್ಞಾನದ ಪ್ರಖರ ದೀಪಗಳನ್ನೇ ಸ್ಥಾಪಿಸಿದ್ದಾರೆ. ಆ ಗ್ರಂಥ ಸಮೂಹದಿಂದ ಪ್ರಕೃತ ಶ್ರೀ ಗೀತಾ ವಿವೃತ್ತಿಯ ಕೆಲವು ವೈಶಿಷ್ಟ್ಯಗಳನ್ನು ವಿಹಂಗಮ ನೋಟದಿಂದ ನೋಡುವಾ.

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಪ್ರಸ್ಥಾನತ್ರಯಗಳಲ್ಲೊಂದಾದ "ಶ್ರೀಮದ್ಭಗವದ್ಗೀತಾ" ಶಾಸ್ತ್ರದ ಮೇಲೆ ವ್ಯಾಖ್ಯಾನ ರೂಪವಾಗಿ ಗ್ರಂಥದ್ವಯಗಳನ್ನು ರಚನೆ ಮಾಡಿದ್ದಾರೆ. ಒಂದು "ಗೀತಾಭಾಷ್ಯ", ಎರಡನೆಯದು "ಗೀತಾ

ತಾತ್ಪರ್ಯ ನಿರ್ಣಯ". ಗೀತಾ ಭಾಷ್ಯವು ಶ್ರೀಮದಾಚಾರ್ಯರು ವಿರಚಿಸಿದ ಮೂಲ ಮೂವತ್ತೇಳು ಗ್ರಂಥಗಳಲ್ಲಿ ಪ್ರಥಮ ಕೃತಿ. ಶ್ರೀಮನ್ನಾರಾಯಣನಿಗೆ ಬದರಿಯಲ್ಲಿ ಅರ್ಪಿತ ಮತ್ತು ಅನುಮೋದಿತ ಕೃತಿ. ಗೀತಾಭಾಷ್ಯದಲ್ಲಿ ಶ್ರೀಮದಾಚಾರ್ಯರು ಪ್ರತಿ ಶ್ಲೋಕವನ್ನು ವಿಶ್ಲೇಷಿಸಿ, ಪ್ರಮಾಣಾಕರಗಳಿಂದ ಅರ್ಥಗಳನ್ನು ಸಂಗ್ರಹಿಸಿ, ಸಮಾಖ್ಯಾ ವಾಕ್ಯಗಳನ್ನು ಸಂಯೋಜನೆ ಮಾಡಿ, ಗೀತಾರ್ಥವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅಷ್ಟು ವಿಸ್ತಾರವಾದ ಆಕರ ಸಮೂಹವು ಬುಧ್ಯಾರೂಢವಾಗಲಾರದೆಂದು ಜಿಜ್ಞಾಸುಗಳಲ್ಲಿ ಅನುಕಂಪದಿಂದ "ಗೀತಾ ತಾತ್ಪರ್ಯ ನಿರ್ಣಯ"ವನ್ನು ವಿರಚಿಸಿದ್ದಾರೆ. ಈ ಗ್ರಂಥದಲ್ಲಿ ಅಧಿಕಾರಿಗಳ ಮನಸ್ಸಿನಲ್ಲಿ ಪ್ರಮೇಯಗಳು ಸುಲಭವಾಗಿ ನಿಲ್ಲುವಂತೆ ಶ್ಲೋಕಾರ್ಥವನ್ನು ಸಂಗ್ರಾಹಕವಾಗಿ ಹೇಳಿದ್ದಾರೆ. ಅದೂ ಪ್ರಮಾಣಾಧಾರದಿಂದಲೇ.

ಶ್ರೀಟೀಕಾಕೃತ್ಪಾದರು ಮೇಲಿನ ಎರಡು ಗ್ರಂಥಗಳಿಗೂ ವಿಸ್ತಾರವಾದ ವ್ಯಾಖ್ಯಾನಗಳನ್ನು ರಚಿಸಿದ್ದಾರೆ. "ಗೀತಾ ಭಾಷ್ಯ"ಕ್ಕೆ ಟೀಕಾ "ಪ್ರಮೇಯ ದೀಪಿಕಾ" ಎಂದು, "ಗೀತಾ ತಾತ್ಪರ್ಯ ನಿರ್ಣಯ"ಕ್ಕೆ "ನ್ಯಾಯದೀಪ" ಎಂದು ಟೀಕಾ ಇರುತ್ತವೆ. ಈ ಗ್ರಂಥಗಳ ಸಹಾಯದಿಂದಲೇ ನಾವು ಮೂಲ ಗ್ರಂಥಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

ಮೇಲೆ ಹೇಳಿದ "ಪ್ರಮೇಯ ದೀಪಿಕಾ" ಮತ್ತು "ನ್ಯಾಯದೀಪ"ಗಳಿಗೆ ಶ್ರೀಗುರುಸಾರ್ವಭೌಮರು ಟಿಪ್ಪಣಿಗಳನ್ನು ರಚಿಸಿದ್ದಾರೆ. ಇಷ್ಟೆಲ್ಲ ಟಿಪ್ಪಣಿ ಗ್ರಂಥಗಳನ್ನು ರಚನೆ ಮಾಡಿದಾಗ್ಯೂ ಗುರುವರ್ಯರು ನಮ್ಮಂಥ ಪಾಮರರನ್ನು ಉದ್ಧಾರ ಮಾಡುವುದಕ್ಕೋಸ್ಕರ ಇನ್ನೊಂದು ಗ್ರಂಥವನ್ನು ರಚಿಸಬೇಕಾದದ್ದು ಸೂಕ್ತವೇ. ಗೀತಾ ಮೂಲ ಶ್ಲೋಕಗಳಿಗೆ ಗೀತಾಭಾಷ್ಯ, ಗೀತಾ ತಾತ್ಪರ್ಯ, ಪ್ರಮೇಯ ದೀಪಿಕಾ ಮತ್ತು ನ್ಯಾಯ ದೀಪಗಳಲ್ಲಿ ಉಕ್ತವಾದ ದಿಶೆಯಲ್ಲಿ ಅರ್ಥಗಳನ್ನು ಮನನ ಮಾಡಿಕೊಂಡು

ಚಿಂತನೆಗೆ ಅನುಕೂಲವಾಗುವಂತೆ ಒಂದು ಗ್ರಂಥ ರಚಿಸಿದ್ದಾರೆ. ಅದೇ "ಗೀತಾ ವಿವೃತ್ತಿ" ಎಂಬ ಗ್ರಂಥ. ವಿವೃತ್ತಿ ಎಂದರೆ ವ್ಯಾಖ್ಯಾನವೆಂದರ್ಥ. ಗೀತಾ ವಿವೃತ್ತಿ ಎಂದರೆ ಗೀತೆಯ ವ್ಯಾಖ್ಯಾನವೆಂದು ಈ ಗ್ರಂಥವನ್ನು ಹೇಗೆ ರಚಿಸಿದರೆಂದು ಮಂಗಳ ಶ್ಲೋಕದಲ್ಲಿ ಗ್ರಂಥ ಕರ್ತರೆ ಹೇಳುತ್ತಾರೆ.

ಹರಿಃ ಓಂ –

ಲಕ್ಷ್ಮೀನಾರಾಯಣಂ ನತ್ವಾ ಪೂರ್ಣಬೋಧ ಗುರೂನಪಿ ।
ಕುರ್ಮಃ ಶ್ರೀಕೃಷ್ಣ ಗೀತಾಯಾ ಭಾಷ್ಯಾದ್ಯುಕ್ತಾರ್ಥ ಸಂಗ್ರಹಮ್ ॥

ಈ ಗೀತಾ ವಿವೃತ್ತಿ ಗ್ರಂಥಗತ ವಿಷಯವೇನೆಂದರೆ, ಶ್ರೀಕೃಷ್ಣ ಗೀತೆಯ ಅರ್ಥಬೋಧಕ ಭಾಷ್ಯ ಮತ್ತು ಟೀಕೋಕ್ತ ವಿಷಯ ಸಂಗ್ರಹ. ಭಾಷ್ಯಾದ್ಯುಕ್ತಾರ್ಥಗಳು ವಿಸ್ತಾರ ಮತ್ತು ಗಂಭೀರ. ಬುದ್ಧಿಯಲ್ಲಿ ನೆಲೆಸುವುದು ಸುಲಭವಲ್ಲ. ಆದ್ದರಿಂದಲೇ ಈ ಗೀತಾ ವಿವೃತ್ತಿ ಮಂದಾಧಿಕಾರಿಗಳಿಗೂ ಮತ್ತು ಧೀಮಂತರಿಗೂ ಮನನ ಯೋಗ್ಯವಾದ ಸಂಕ್ಷೇಪ ಕೃತಿ. ಈ ಗ್ರಂಥವನ್ನು ಅಧ್ಯಯನ ಮಾಡಿದ ಪ್ರತಿಯೊಬ್ಬ ವ್ಯಕ್ತಿಯೂ ಇದರ ಹಿರಿಮೆಯನ್ನು ಅರಿಯುತ್ತಾನೆ.

ಇನ್ನು ಗೀತಾ ವಿವೃತ್ತಿಯಲ್ಲಿ ವಿಷಯಗಳನ್ನು ನಮಗೆ ಬೋಧಕವಾಗುವ ರೀತಿಯಲ್ಲಿ ಹೇಗೆ ಹೇಳಿದ್ದಾರೆಂಬುದನ್ನು ಈ ಲೇಖನದ ಕೊನೆಯುವರೆಗೆ ನೋಡುತ್ತ ಹೋಗುವಾ.

೧. ಶ್ರೀಮನ್ಮಹಾಭಾರತವು ವೈಶಂಪಾಯನ ಮುನಿ – ಜನಮೇಜಯ ರಾಜನ ಸಂವಾದ ರೂಪ. ಮಹಾಭಾರತದಲ್ಲಿ ಅಷ್ಟಾದಶ (೧೮) ಪರ್ವಗಳಿವೆ. "ತತ್ರ ಭೀಷ್ಮ ಪರ್ವಣಿ ಭಾರತ ಪಾರಿಜಾತ ಮಧುಭೂತಾಂ ಸರ್ವ ಭಾರತಾರ್ಥ ಸಂಗ್ರಹ ಭೂತಾಂ ಶ್ರೀಕೃಷ್ಣಾರ್ಜುನ ಸಂವಾದ ರೂಪಾಂ ಭಗವದ್ಗೀತಾ ನಿಬಬಂಧ." (ಗೀತಾ ವಿವೃತ್ತಿ).

ಈ ಹದಿನೆಂಟು ಪರ್ವಗಳ ಮಧ್ಯ ಭೀಷ್ಮ ಪರ್ವದಲ್ಲಿ

ಭಾರತವೆಂಬ ಪಾರಿಜಾತ ಕುಸುಮಗಳಿಂದ ಸಂಗ್ರಹಿಸಿದ ಮಧುವಿನೋಪಾದಿಯಲ್ಲಿರುವ ಭಗವದ್ಗೀತೆಯೆಂಬ ನಾಮಧೇಯವುಳ್ಳ ಸಾರಭಾಗವನ್ನು ರಚಿಸಿದರು.

'ತತ್ರಪೂರ್ವಷಟ್ಕೇ – ಜ್ಞಾನೋಪಾಯೋಕ್ತಿಃ ।'

'ದ್ವಿತೀಯಷಟ್ಕೇ – ತತ್ಸಾಧ್ಯಜ್ಞಾನಸ್ಯೋಕ್ತಿಃ ।'

'ತೃತೀಯಷಟ್ಕೇ – ಪ್ರಾಗುಕ್ತಪ್ರಪಂಚನಂಕ್ರೀಯತೇ ಇತಿ ವಿವೇಕಃ ।'

"ಪ್ರಥಮ ಆರು ಅಧ್ಯಾಯಗಳಲ್ಲಿ ಜ್ಞಾನೋಪಾಯ. ದ್ವಿತೀಯ ಆರು ಅಧ್ಯಾಯಗಳಲ್ಲಿ ಅದರ ಸಾಧ್ಯಜ್ಞಾನ. ತೃತೀಯ ಆರು ಅಧ್ಯಾಯಗಳಲ್ಲಿ ಎರಡು ಷಟ್ಕದಲ್ಲಿ ಉಕ್ತಾರ್ಥ ಚಿಂತನರೂಪ."

ಪ್ರಥಮ ಷಟ್ಕದಲ್ಲಿ, ಪ್ರಥಮಾಧ್ಯಾಯ ಮತ್ತು ದ್ವಿತೀಯಾಧ್ಯಾಯದಲ್ಲಿ ಕೆಲವು ಶ್ಲೋಕಗಳು ಕೃಷ್ಣನಿಂದ ಅರ್ಜುನನಿಗೆ ಬೋಧೆ ಮಾಡಲು ಪ್ರಸಕ್ತಿಯನ್ನು ಸಂಪಾದಿಸುತ್ತವೆ.

ಧರ್ಮಾದಿ ವಿಷಯವನ್ನು ಪ್ರಶ್ನೆಮಾಡದೇ / ಪ್ರಾರ್ಥನೆಮಾಡದೇ ಹೇಳಕೂಡದೆಂದು ಪ್ರಾಚೀನರ ಉಕ್ತಿ ಇದೆ. "ನಾಪೃಷ್ಟಃಕಸ್ಯಚಿದ್ಬ್ರೂಯಾತ್" ಎಂದು. ಇಲ್ಲಿ ಶ್ರೀಕೃಷ್ಣ ಪರಮಾತ್ಮನು ತನ್ನಷ್ಟಕ್ಕೆ ತಾನೇ ತತ್ವಬೋಧೆ ಮಾಡಿದನೇ ಅಥವಾ ಅರ್ಜುನ ಕೇಳಿದನೇ? ಅಂದರೆ, ಅರ್ಜುನನು ಬಂಧು ಬಾಂಧವ ಮೋಹಪಾಶಕ್ಕೊಳಗಾಗಿ, ಬುದ್ಧಿಮಾಂದ್ಯನಾಗಿ ಯುದ್ಧ ವಿಮುಖಪ್ರಾಯನಾಗಿದ್ದನು. ಕೊನೆಗೆ ಅರ್ಜುನನು ತನಗೆ ಹಿತವಾದದು, ಧರ್ಮವಾದದು ಬೋಧಿಸೆಂದು ಶ್ರೀಕೃಷ್ಣನನ್ನು ಪ್ರಾರ್ಥನೆ ಮಾಡಿದ್ದಾನೆ.

"ಯಚ್ಛ್ರೇಯ ಸ್ಯಾನ್ನಿಸ್ಚಿತಂ ಬ್ರೂಹಿತನ್ಮೆ ।

ಶಿಷ್ಯಸ್ತೇಹಂ ಶಾಧಿಮಾಂ ತ್ವಾಂ ಪ್ರಪನ್ನಂ ॥ ಗೀತಾ ೨.೭ ॥

ಪ್ರಸಂಗಾನುಕೂಲ್ಯ ಮತ್ತು ಶ್ರೋತ್ರಾನುಕೂಲ್ಯಗಳು ಒದಗಿದ ನಂತರ ವಕ್ತ್ರಾನುಕೂಲ್ಯದಿಂದ ಸದಾ ಸನ್ನದ್ಧನಾದ

ಶ್ರೀಕೃಷ್ಣಪರಮಾತ್ಮನು, ಅರ್ಜುನನ ಪ್ರಾರ್ಥನಾನುಸಾರ ತತ್ವಬೋಧೆ ಮಾಡುತ್ತಾನೆ.

೨. ಶ್ರೀಗುರುಸಾರ್ವಭೌಮರು ಪ್ರತಿಯೊಂದು ಶ್ಲೋಕಕ್ಕೂ ಸಂಕ್ಷೇಪವಾಗಿ ಅವತಾರಿಕಾ ಬರೆದಿರುತ್ತಾರೆ. ಇದರಿಂದ ಭಗವದ್ವಚನವು ಯಾವ ನಿಮಿತ್ತ ಪ್ರವೃತ್ತವಾಗಿದೆ ಎಂಬುದನ್ನು ತಿಳಿಯುವುದು ಸುಲಭ.

ಶ್ರೀಮದಾಚಾರ್ಯರು "ಗೀತಾ ಭಾಷ್ಯ"ದಲ್ಲಾಗಲಿ ಅಥವಾ "ಗೀತಾ ತಾತ್ಪರ್ಯ"ದಲ್ಲಾಗಲಿ ವ್ಯಾಖ್ಯಾನವನ್ನು ಅದ್ಯಾಯ ೨, ಶ್ಲೋಕ ೧೧ ಭಗವದ್ವಚನದಿಂದ ಪ್ರಾರಂಭಿಸಿದ್ದಾರೆ.

"ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನು ಶೋಚಂತಿ ಪಂಡಿತಾಃ ॥
ಗೀತಾ ೨.೧೧ ॥

ಅವತಾರಿಕಾ : ಅರ್ಜುನನ ಪ್ರಶ್ನೆಯನ್ನೇ ಆಧರಿಸಿಕೊಂಡು ಶಿಷ್ಟಾಚಾರ ಪ್ರದರ್ಶನ ಮಾಡಿ ತತ್ವವನ್ನುಪದೇಶ ಮಾಡುತ್ತಾನೆ. ಅಶೋಚ್ಯಮಿತಿ, ಶೋಕಾನರ್ಹರನ್ನು ಕುರಿತು ಶೋಕಿಸುತ್ತೀಯೆ, ನಿನ್ನ ಬುದ್ಧಿಗೆ ತೋರಿದಂತೆ ಮಾತನಾಡುತ್ತೀಯೆ. ಪಂಡಿತರು/ಜ್ಞಾನಿಗಳು ಪ್ರಾಣಹೋದವರನ್ನು ಸಹ ಜೀವವಿದ್ದವರಂತೆಯೇ ತಿಳಿಯುತ್ತಾರೆ. ವಿಶೇಷವೆಂದರೆ ಈ ಶ್ಲೋಕದಲ್ಲಿ 'ಚ'ಕಾರಾರ್ಥವು ಸಮುಚ್ಚಾಯಕವಲ್ಲ ಉಪಮಾರ್ಥ. 'ಉಪಮಾರ್ಥಶ್ಚಕಾರಃ' ಎಂದು ಗೀತಾ ವಿವೃತ್ತಿಕಾರರು ವಿವರಣೆ ಕೊಟ್ಟಿದ್ದಾರೆ. 'ಚ'ಕಾರದ ಈ ರೀತಿಯ ಪ್ರಯೋಗ ಮತ್ತು ವಿವರಣೆ ಅಪರೂಪ. ಅಂದರೆ ಜೀವವಿರುವಂತೆಯೇ - ಸತ್ತವರನ್ನೂ ಕುರಿತು ಶೋಕಪಡುವುದಿಲ್ಲ ಎಂದು ಅಭಿಪ್ರಾಯ.

೩. ಗೀತೆಯಲ್ಲಿ ಪ್ರಶ್ನೆಮಾಡುವವನು ಅರ್ಜುನ - ಉತ್ತರ

ಕೊಡುವವನು ಶ್ರೀಕೃಷ್ಣ. ಒಂದು ಪ್ರಶ್ನೆಗೆ ಉತ್ತರ ರೂಪವಾಗಿ ಅನೇಕ ಶ್ಲೋಕಗಳಿರುತ್ತವೆ. ಉತ್ತರ ಕೊಡುವಾಗ, ಕಾಲಾಂತರದಲ್ಲಿ ಅರ್ಜುನನ ಮನಸ್ಸಿಗೆ ಬರತಕ್ಕ ಅವಾಂತರ ಪ್ರಶ್ನೆಗಳನ್ನು/ಆಕಾಂಕ್ಷೆಗಳನ್ನು ಊಹಿಸಿಕೊಂಡು ಶ್ರೀಕೃಷ್ಣನು ಉತ್ತರ ಕೊಡುತ್ತಾನೆ. ಸುಮ್ಮನೆ ಶ್ಲೋಕಗಳನ್ನು ಓದಿ ಶ್ಲೋಕಾರ್ಥಗಳನ್ನು ತಿಳಿದುಕೊಂಡರೆ ಸಾಲದೆಂದು "ವಿವೃತ್ತಿ"ಯನ್ನು ನೋಡಿದ ಜಿಜ್ಞಾಸುಗಳಿಗೆ ವಿದಿತವಾಗುತ್ತದೆ. ಅರ್ಜುನನ ಆಕಾಂಕ್ಷೆ ಏನು ಅಥವಾ ಅವಾಂತರ ಪ್ರಶ್ನೆಯೇನು ಎಂದು ತಿಳಿದರೆ ಉತ್ತರದ ಸ್ವಾರಸ್ಯವನ್ನು ತಿಳಿದು ನಾವು ವಿಶೇಷ ಶಾಸ್ತ್ರಾನಂದ/ಪ್ರಯೋಜನ ಪಡೆಯಬಹುದು. ಕೆಳಗಿನ ಈ ಎರಡು ಶ್ಲೋಕಗಳಿಗೆ ಶ್ರೀರಾಯರು ಹೇಗೆ ಆಕಾಂಕ್ಷೆಯನ್ನು ತೋರಿಸಿಕೊಟ್ಟಿದ್ದಾರೆಂಬುದನ್ನು ನೋಡುವಾ.

ಅವತಾರಿಕೆ/ಆಕಾಂಕ್ಷಾ :

"ತತ್ಕಿಂ ತೇಷಾಂ ಜೀವನಾ ಶಾತ್ತವ ಶೋಕಃ ಉತ ದೇಹನಾಶಾತ್ । ನಾದ್ಯಃ ।

ಜೀವಾನಾಂ ಅನಾದಿ ನಿತ್ಯತ್ವಾತ್ ಇತ್ಯತ ಆಹ ॥ ನತ್ವೈವಾಹ ಮಿತಿ । " (ಗೀ.ವಿ.)

"ಹೇ ಅರ್ಜುನಾ ನೀನು ಶೋಕ ಪಡುತ್ತಿರುವುದು ಅವರುಗಳ ಜೀವನಾಶಕ್ಕೋ ಅಥವಾ ದೇಹನಾಶಕ್ಕೋ"? ಎಂಬುದು ಅರ್ಜುನನ ಮನೋಗತ ಸಮಸ್ಯೆ. "ಅದರಲ್ಲಿ ಮೊದಲನೆಯದಲ್ಲಿ ಯಾಕೆಂದರೆ ಜೀವರು ನಿತ್ಯರು" ಎಂಬ ಪರಿಹಾರ ರೂಪವಾದ ಉತ್ತರ ॥ ನತ್ವೇವಾಹಮಿತಿ ॥

"ನತ್ವೇವಾಹಂ ಜಾತುನಾಸಂ ನತ್ವಂ ನೇಮೇಜನಾಧಿಪಾಃ ।

ನ ಚೈವ ನ ಭವಿಷ್ಯಾಮ ಸರ್ವೇ ವಯ ಮತಃ ಪರಮ್ ॥ಗೀತಾ ೨-೧೨॥

"ನಾನು ಹಿಂದೆ ಇರಲಿಲ್ಲವೆಂದಲ್ಲ, ಮುಂದೆ

ಇರುವುದೆಲ್ಲವೆಂದಿಲ್ಲ, ನಾನೂ ನೀನೂ ಮುಂದೆ ಇರುವ ರಾಜರು ಎಲ್ಲರೂ ತ್ರಿಕಾಲದಲ್ಲಿಯೂ ಇರುತ್ತಲೇ ಇದ್ದೇವೆ. ಅಂದರೆ ಜೀವರು ಅನಾದಿನಿತ್ಯರಾದ್ದರಿಂದ ಜೀವನಾಶವನ್ನು ಕುರಿತು ಶೋಕವು ವ್ಯರ್ಥ" ಎಂದು ಸಮಾಧಾನ.

"ದೇಹ ನಾಶಾದಿತಿ ದ್ವಿತೀಯ ಪಕ್ಷಂ ನಿರಾಹ ॥ ದೇಹಿನ ಇತಿ"॥

"ದೇಹ ನಾಶದಿಂದ ಶೋಕವೆಂದರೆ ಅದೂ ವ್ಯರ್ಥವೆಂದು ಎರಡನೆಯ ಶಂಕಾ ಪರಿಹಾರ."

"ದೇಹಿನೋಽಸ್ಮಿನ್ ಯಥಾದೇಹೇ ಕೌಮಾರಂ ಯೌವನಂಜರಾ ।

ತಥಾ ದೇಹಾಂತರ ಪ್ರಾಪ್ತಿಃ ಧೀರಸ್ತತ್ರನಮುಹ್ಯತಿ " ॥ಗೀತಾ ೨–೧೩॥

"ಜೀವನಿಗೆ ಸ್ಥೂಲ ದೇಹದಲ್ಲಿ ಕೌಮಾರ, ಯೌವನ, ಜರಾ ಎಂದು ಹೇಗೆ ಬದಲಾವಣೆಗಳಿವೆಯೋ, ಹಾಗೆಯೇ ದೇಹಾಂತರ ಪ್ರಾಪ್ತಿ. ಆದ್ದರಿಂದ ಶೋಕವು ವ್ಯರ್ಥ ಎಂದು ಭಾವ."

ಹೀಗೆ ವಿವೃತ್ತಿಕಾರರು ಅರ್ಜುನನ ಮನೋಗತ ಆಕಾಂಕ್ಷೆಯನ್ನು ತೋರಿಸಿ ಅದಕ್ಕೆ ಗೀತೆಯ ಉತ್ತರವನ್ನು ಸ್ಪಷ್ಟಪಡಿಸಿರುವರು.

೪. ಗೀತೆಯ ೧೩ನೇ ಅಧ್ಯಾಯದಲ್ಲಿ, ಬ್ರಹ್ಮಸೂತ್ರಗಳ ವಿಷಯವಾಗಿ, ಶ್ರೀಕೃಷ್ಣನು ತನ್ನ ನಿಷ್ಕೃಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಏನೆಂದರೆ –

ಋಷಿಭಿರ್ಬಹುಧಾಗೀತಂ ಛಂದೋಭಿರ್ವಿವಿಧೈಃಪೃಥಕ್ ।

ಬ್ರಹ್ಮಸೂತ್ರ ಪದೈಶ್ಚೈವ ಹೇತುಮದ್ಭಿರ್ವಿನಿಶ್ಚಿತಮ್ ॥ ಗೀತಾ ೧೩–೫ ॥

ಕ್ಷೇತ್ರ ಕ್ಷೇತ್ರಜ್ಞ ವಿಷಯವು ಋಷಿಗಳಿಂದ ವಿಪುಲವಾಗಿ ವರ್ಣಿತವಾಗಿದೆ. ವೇದಗಳ ಅನೇಕ ಭಾಗಗಳಲ್ಲಿ ವರ್ಣಿತವಾಗಿದೆ. ಆದರೂ ಬ್ರಹ್ಮಸೂತ್ರ ಹೇತುಗಳಿಂದ ತತ್ವವನ್ನು ನಿಶ್ಚಯ ಮಾಡಬೇಕು, ಎಂದು ಸ್ಪಷ್ಟ ವಚನವಿದೆ. ಈ ವಾಕ್ಯವನ್ನು ಮನದಲ್ಲಿರಿಸಿ ಗುರುವರ್ಯರು ಶ್ರೀಕೃಷ್ಣನ ವಾಕ್ಯಗಳಿಗೆ ಅರ್ಥ ಬರೆಯುವ ವೈಶಿಷ್ಠ್ಯವನ್ನು ಈ ಕೆಲಗಿನ ಶ್ಲೋಕದ ವ್ಯಾಖ್ಯಾನದಿಂದ ನೋಡಬಹುದು.

ಕರ್ಮಣ್ಯೇವಾಧಿಕಾರಸ್ತೆ ಮಾಫಲೇಷು ಕದಾಚನ ।
ಮಾಕರ್ಮ ಫಲಹೇತುರ್ಭೂ ಮಾತೇ ಸಂಗೋಸ್ತ್ವಕರ್ಮಣಿ
॥ ಗೀತಾ ೨-೪೭ ॥

"ನಿನಗೆ ಕರ್ಮಮಾಡಬೇಕಾದರೆ ಮಾತ್ರ ಅಧಿಕಾರ ಸ್ವರ್ಗಾದಿಫಲಗಳಲ್ಲಲ್ಲ. ಕರ್ಮ ಮಾಡಬೇಕಾದರೆ ಫಲೋದ್ದೇಶವನ್ನು ಫಲವನ್ನು ಮನಸ್ಸಿಗೆ ತರಬಾರದು. ಹಾಗೆಂದಮಾತ್ರಕ್ಕೆ ಕರ್ಮವನ್ನು ಮಾಡಬಾರದೆಂಬುದು ಮನಸ್ಸಿಗೆ ಬಾರದಿರಲಿ."

ಹೀಗೆ ಎಲ್ಲಿ ಹೇಳಿದೆ ಎಂದರೆ "ಕುರ್ವನ್ನೇವೇತಿ" ಎಂಬ ಶೃತಿಯಲ್ಲಿ "ಏವಂತ್ವಯಿ ನಾನ್ಯಥೇತೋಸ್ತಿ" ಎಂದು ಉತ್ತರಾರ್ಧದಲ್ಲಿ ಕರ್ಮಮಾಡದಿದ್ದರೆ ಪಾಪ ಸಂಭವಿಸುವುದೆಂದು ಹೇಳಿದೆ (ಈಶಾವಾಸ್ಯ).

ಅಲ್ಪ ಅಸ್ಥಿರ ಸ್ವರ್ಗಾದಿಗಳ ಕಾಮನೆಯು ನಿಂದಿತವಾಗಿದೆ. ಜ್ಞಾನ, ಭಕ್ತಿ, ಭಗವದ್ದರ್ಶನ, ಮೋಕ್ಷಾದಿಗಳು ನಿಂದಿತವಾಗಿಲ್ಲ. ಆದ್ದರಿಂದ ನೀನು ನಿನ್ನಂಥ ಜ್ಞಾನಿಗಳು ಮಹಾತ್ಮರ ಆಚರಣೆಯಂತೆಯೇ ನಡೆಯಬೇಕು. "ವೃಣೀಮಹೀತೇ ಪರಿತೋಷಣಾಯ" ಇತಿ ಚತುರ್ಥಸ್ಕಂಧ ಭಾಗವತದಲ್ಲಿ "ಮಹತಾಮಾಚಾರಾಚ್ಚ" ಮಹಾತ್ಮರ ಆಚಾರ ನಿದರ್ಶನಗಳಿವೆ.

ಅರ್ಥನಿರ್ಧಾರಣಕ್ಕೆ ಅನುಕೂಲವಾದ ಬ್ರಹ್ಮಸೂತ್ರಗಳು -

ಓಂ ಬಹಿಸ್ತೂಭಯದಾಪಿ ಸ್ಮೃತೇರಾಚಾರಾಚ್ಚ ಓಂ ।

ಓಂ ಅನಿಯಮಃ

ಸರ್ವೇಷಾಮಾವಿರೋಧಾಚ್ಛಬ್ದಾನು-ಮಾನಾಭ್ಯಾಮ್ ಓಂ ।

ಓಂ ಭಾವಂತು ಬಾದರಾಯಣೋ ಅಸ್ತೀತಿ ಹಿ ಓಂ ।

ಓಂ ಫಲಮತ ಉಪಪತ್ತೇಃ ಓಂ ।

ಓಂ ನಪ್ರತಿಕೇನಹಿಸಃ ಓಂ ।

ಈಶಾವಾಸ್ಯೋಪನಿಷತ್, ಭಾಗವತ ಮತ್ತು ಬ್ರಹ್ಮಸೂತ್ರಗಳಿಂದ ಅರ್ಥನಿರ್ಧಾರ ಮಾಡಿದ್ದಾರೆ. ನೋಡಲು ಸುಲಭಕಂಡ ಶ್ಲೋಕಗಳು ಬಹಳ ಅರ್ಥಗಾಂಭೀರ್ಯ ಉಳ್ಳವುಗಳಾಗಿವೆ ಎಂದು 'ವಿವೃತ್ತಿ' ತಿಳಿಸುತ್ತದೆ.

೫. ಅಪರೋಕ್ಷಜ್ಞಾನಿಯ ಲಕ್ಷಣಗಳನ್ನು ಈ ಮೊದಲೇ ಹೇಳಿದರೂ ಇಲ್ಲಿ ವಿಶೇಷ ಸ್ಪಷ್ಟಗೊಳಿಸುತ್ತಾರೆ.

"ಸುಹೃನ್ಮಿತ್ರಯುರ್ದಾಶೀನ ಮಧ್ಯಸ್ಥದ್ವೇಷ್ಯ ಬಂಧುಷು ।

ಸಾಧುಷ್ವಪಿಚ ಪಾಪೇಷು ಸಮ ಬುದ್ಧಿರ್ವಿಶಿಷ್ಯತೆ ॥ ಗೀತಾ ೬-೯ ॥

ಈ ಶ್ಲೋಕದಲ್ಲಿ ಸುಹೃತ್, ಮಿತ್ರ, ಅರಿ, ಬಂಧು ಇತ್ಯಾದಿ ಶಬ್ದಗಳು ಲೋಕರೂಢಿಯಲ್ಲಿದ್ದರೂ ಶಾಸ್ತ್ರರೀತ್ಯಾ ಆ ಪದಗಳ ಸಮಂಜಸ ಅರ್ಥಗಳನ್ನು ತಿಳಿಸುತ್ತಾರೆ. ಸುಹೃತ್, ಮಿತ್ರ ಈ ಪದಗಳು ಯದ್ಯಪಿ ರೂಢಿಯಲ್ಲಿದ್ದರೂ ಏಕಾರ್ಥ ಕಂಡರೂ ಶಬ್ದಗಳಲ್ಲಿ ವೈಶಿಷ್ಟ್ಯವಿದೆ ಎಂದು ತಿಳಿಸುತ್ತಾರೆ, ಶ್ರೀರಾಯರು. ಈಗ ನೋಡುವಾ ಆ ವಿಶೇಷಾರ್ಥಗಳನ್ನು.

ಸುಹೃತ್ - ಪ್ರತ್ಯುಪಕಾರ

ನಿರಪೇಕ್ಷೋಪಕೃತ್ = ಪ್ರತ್ಯುಪಕಾರ ಅಪೇಕ್ಷಾರಹಿತನಾಗಿ ಉಪಕಾರ ಮಾಡುವವನು.

ಮಿತ್ರ – ಕ್ಲೇಶಸ್ಥಾನಂ ವಿಜ್ಞಾಪ್ಯತತೋ ರಕ್ಷಾಕೃತ್ = ಆಪತ್ಕಾಲವನ್ನು ತಿಳಿದು ರಕ್ಷಣೆ ಮಾಡುವವನು.

ಅರಿ – ವಧಾದಿಕರ್ತಾ = ಹಿಂಸೆ ವಧಾದಿಗಳನ್ನು ಮಾಡುವವನು.

ಉದಾಶೀನ – ಕರ್ತವ್ಯೆ ಉಪಕಾರೇ ಅಪಕಾರೇ ಚ ಯ ಉದಾಸ್ತೆ = ಕರ್ತವ್ಯ ಉಪಕಾರ ಅಪಕಾರಗಳಲ್ಲಿ ತಾತ್ಸಾರ ಬುದ್ಧಿಯುಳ್ಳವನು

ಮಧ್ಯಸ್ಥ – ಉಪಕಾರಾಪಕಾರೋ ಭಯಕೃತ್ = ಸಮಯಾನುಸಾರಿ ಉಪಕಾರ ಅಪಕಾರ ಮಾಡುವವನು

ದ್ವೇಷ್ಯಃ – ಅವಾಂಛಿತಕೃತ್ = ಬೇಡವಾದದ್ದನ್ನೇ ಮಾಡುವವನು.

ಬಂಧುಃ – ಉಪಕರ್ತಾ = ಉಪಕಾರ ಮಾಡುವವನು.

ಇದೇ ರೀತಿ ಇನ್ನೊಂದು ಶ್ಲೋಕದಲ್ಲಿ ಶ್ರೀ ರಾಯರು ತಿಳಿಸತಕ್ಕ ಅರ್ಥಗಳನ್ನು ನೋಡುವಾ.

"ದಂಭೋ ದರ್ಪೋಽಭಿಮಾನಶ್ಚ ಕ್ರೋಧಃಪಾರುಷ್ಯಮೇವಚ ।

ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದ ಮಾಸುರೀಮ್" ॥ ಗೀತಾ ೧೬–೪ ॥

ಅವತಾರಿಕಾ ಮತ್ತು ಶ್ಲೋಕ ಪ್ರಯೋಜನಃ –

"ತ್ಯಾಗಾಯ ಅಸುರ ಲಕ್ಷಣ ಮಾಹ" ॥ ಗೀ. ವಿ. ॥

ಮೋಕ್ಷ ಸಾಧನಕ್ಕೆ ದುರ್ಜನರ ಸಂಗವು ಪ್ರತಿಬಂಧಕವಾದ್ದರಿಂದ ಅಂಥವರ ಸಂಗದಿಂದ ದೂರವಿರಬೇಕೆಂದು ಶ್ರೀಕೃಷ್ಣ ಆಶಯ. ದುರ್ಜನರು ಯಾರೆಂದು ತಿಳಿಯದೇ ಅವರನ್ನು ಬಿಡುವುದು ಹೇಗೆ ಎಂಬ ಆಕಾಂಕ್ಷೆಗೆ ಉತ್ತರವಾಗಿ ದುರ್ಜನರ ಲಕ್ಷಣಗಳನ್ನು ಪ್ರಥಮತಃ ಪಾರ್ಥನಿಗೆ, ತದ್ವಾರಾ ನಮಗೆ ತಿಳಿಸುತ್ತಾನೆ.

ದಂಭಃ = ಆತ್ಮಾಲ್ಪತ್ವಂ ಜ್ಞಾತ್ವಾಪಿ ಮಹತ್ವ ಪ್ರದರ್ಶನಂ = ತನ್ನ ಅಲ್ಪತ್ವವನ್ನು ತಿಳಿದಾಗ್ಯೂ ಮಹತ್ವ ಪ್ರದರ್ಶನ ಮಾಡುವುದು.

ದರ್ಪಃ = ಸತ್ಯಪಿ ಭಯಕಾರಣೆ ಮದಾತ್ತದ ಭಾವದರ್ಶನಂ = ತನ್ನ ಭಯಕ್ಕೆ ಕಾರಣವಿದ್ದಾಗ್ಯೂ ಮದದಿಂದ ತದ ಭಾವದರ್ಶನ

ಅಭಿಮಾನಃ = ಪ್ರಮಾಣಾತಿಕ್ರಮಣ = ಪ್ರಮಾಣವಾದದ್ದನ್ನು ಮೀರಿ ನಡೆಯುವುದು.

ಕ್ರೋಧಃ = ಪರಪೀಡಾಕರ ಚಿತ್ತವಿಕಾರಃ ಪರರಿಗೆ ಹಿಂಸೆ ಮಾಡಬೇಕೆಂದು ಇಚ್ಛಿಸುವ ಮನೋವಿಕಾರ

ಪಾರುಷ್ಯ = ನಿಷ್ಠುರತ್ವ = ದಯಾದಾಕ್ಷಿಣ್ಯರಹಿತ ಕಠೋರ ವಚನಗಳು.

ಇದೇ ರೀತಿ ಹಲವಾರು ಶ್ಲೋಕಗಳಲ್ಲಿ ಪ್ರತಿ ಪದಾರ್ಥಗಳನ್ನು ವರ್ಣಿಸಿದ್ದಾರೆ. ಇದರಿಂದ ನಾವು ತಿಳಿದುಕೊಂಡ ಸಾಮಾನ್ಯಾರ್ಥಕ್ಕೂ ವಿಶೇಷಾರ್ಥಕ್ಕೂ ವ್ಯತ್ಯಾಸ ಕಾಣಬಹುದು. ಆದ್ದರಿಂದಲೇ ಇದಕ್ಕನ್ನುತ್ತಾರೆ "ಗೀತಾಶಾಸ್ತ್ರ".

೬. ಅಪಾತತಃ ಅರ್ಥಕಾಣತಕ್ಕ ಒಂದು ಶ್ಲೋಕಕ್ಕೆ "ವಿವೃತ್ತಿ"ಕಾರರ ಅರ್ಥ ವಿವರಣೆಯನ್ನು ತಿಳಿಯುವಾ.

"ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೆ ಗವಿ ಹಸ್ತಿನೀ ।
ಶುನಿಚೈವಶ್ವಪಾಕೇಚ ಪಂಡಿತಾಃ ಸಮದರ್ಶಿನಃ ॥ ಗೀತಾ ॥

ಕೆಲಕೆಲವು ವ್ಯಾಖ್ಯಾನ ಪುಸ್ತಕಗಳನ್ನು ನೋಡಬೇಕು. ಅವರುಗಳ ಅಭಿಪ್ರಾಯದಲ್ಲಿ ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣ, ಗೋವು, ಆನೆ, ನಾಯಿ, ನಾಯಿಯನ್ನು ತಿನ್ನುವವ ಇವರೆಲ್ಲರನ್ನೂ ಯಾವನು ಸಮನಾಗಿ ತಿಳಿಯುತ್ತಾನೋ ಅವನೇ ಪಂಡಿತನು ಎಂದು.

ಇಷ್ಟು ಅವ್ಯವಸ್ಥಿತವಾದ ಉಪದೇಶಗಳನ್ನು ಶ್ರೀಕೃಷ್ಣನು ಮಾಡಲು ಸಾಧ್ಯವೇ ಇಲ್ಲ. ಈ ಶ್ಲೋಕದ ಯಥಾರ್ಥ

ಅನುಸಂಧಾನಕ್ಕಾಗಿ ಶ್ರೀಮಧ್ವರ ಭಾಷ್ಯ ಶ್ರೀರಾಯರ ವಿವೃತ್ತಿಯನ್ನು ನೋಡಿ ತಿಳಿಯುವಾ .

ಭಾಷ್ಯ – ಅವತಾರಿಕೆ : "ಪರಮೇಶ್ವರ ಸ್ವರೂಪಾಣಾಂ ಸರ್ವತ್ರ ಸಾಮ್ಯ – ದರ್ಶನಮ್ ಚಾಪರೋಕ್ಷ ಜ್ಞಾನ ಸಾಧನ ಮಿತ್ಯಾಶಯವಾನಾಹ ವಿದ್ಯೇತಿ ॥

"ವಿಷಮಷ್ವಪಿ ಜೀವೇಷು ಸಮೋವಿಷ್ಣುಃ ಸದೈವತು ।

ಯಃತೃಣಾದಿಗತಸ್ಯಾಪಿ ಗುಣಪೂರ್ಣ ಹರೇಸ್ಸದಾ ॥ ಇತಿ ಚ ॥"

ಅರ್ಥಃ – "ಪರಮೇಶ್ವರನ ರೂಪಗಳ ಸಾಮ್ಯ ದರ್ಶನವು ಅಪರೋಕ್ಷ ಜ್ಞಾನಕ್ಕೆ ಸಾಧನವೆಂದು ವಿದ್ಯಾವಿನಯ ಸಂಪನ್ನ ಇತ್ಯಾದಿ ಉಪದೇಶ."

ಜೀವರುಗಳಲ್ಲಿ ಯದ್ಯಪಿ ಶ್ರೇಷ್ಠತ್ವ ಕನಿಷ್ಟತ್ವ ಇತ್ಯಾದಿ ವ್ಯತ್ಯಾಸಗಳಿದ್ದರೂ ಅದರಲ್ಲಿರತಕ್ಕ ಭಗವಂತ ಸಮನಾಗಿದ್ದಾನೆ. ತೃಣಾದಿ ಜೀವರುಗಳಲ್ಲಿದ್ದ ಭಗವಂತನೂ ಸಹ ಗುಣಪೂರ್ಣನೂ ನಿರ್ದೋಷನೂ ಆಗಿದ್ದಾನೆ."

ವಿವೃತ್ತಿಃ – "ಪರಮೇಶ್ವರ ರೂಪಾಣಾಂ ಸರ್ವತ್ರ ಸಾಮ್ಯದರ್ಶನಮ್ ಚಾಪರೋಕ್ಷ ಜ್ಞಾನಸಾಧನ ಮಿತ್ಯಾಶಯವಾನಾಹ ॥ ವಿದ್ಯೇತಿ ॥ ವಿದ್ಯಾವಿನಯ ಸಂಪನ್ನ ಬ್ರಾಹ್ಮಣೇಷು, ಗವಿ, ಹಸ್ತಿಷು, ವಿಷಮೇಷು ಸ್ಥಿತಂ ಹರಿಂ,

ಸಮಂ = ಗುಣೇಷು ತಥಾ ದೋಷಾ ಭಾವೇಷು ಚ ಸಮಂ ತಾರತಮ್ಯಾ ಭಾವಂಚ ಯೇ ಪಶ್ಯಂತಿ ತೇ ಸಮದರ್ಶಿನ ಇತ್ಯರ್ಥಃ ।

ಅಸ್ಯ ಶ್ಲೋಕಸ್ಯ ಭಗವದ್ವಿಷಯತ್ವಂ "ನಿರ್ದೋಷಂ ಹಿ ಸಮಂಬ್ರಹ್ಮ" ಇತ್ಯುತ್ತರ ವಾಕ್ಯಗಮ್ಯಾ. ಅಪರೋಕ್ಷ ಜ್ಞಾನ ಹೇತುತ್ವಾತ್ ಪ್ರಕರಣ ಗಮ್ಯೇತಿ ಜ್ಞೇಯಃ " ॥

ಅರ್ಥಃ – "ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣನಲ್ಲಿ,

ಹಸುವಿನಲ್ಲಿ, ಆನೆಗಳಲ್ಲಿ ಇರತಕ್ಕ ಪರಮಾತ್ಮನು ಗುಣಪೂರ್ಣನು ಮತ್ತು ನಿರ್ದೋಷನು ಈ ದೃಷ್ಟಿಯಲ್ಲಿ ಸಮ. ಜೀವರುಗಳಲ್ಲಿ ವ್ಯತ್ಯಾಸವಿದ್ದರೂ ಅವರಲ್ಲಿರತಕ್ಕ ಪರಮಾತ್ಮನು ಗುಣಪೂರ್ಣನು ಮತ್ತು ನಿರ್ದೋಷನು ಈ ದೃಷ್ಟಿಯಲ್ಲಿ ಸಮ. ಜೀವರುಗಳಲ್ಲಿ ವ್ಯತ್ಯಾಸವಿದ್ದರೂ ಅದರಲ್ಲಿರತಕ್ಕ ಪರಮಾತ್ಮನು ವಿಷಮನಲ್ಲ ಸಮನಾಗಿದ್ದಾನೆ. ಹೀಗೆ ತಿಳಿದರೆ ಅಪರೋಕ್ಷಜ್ಞಾನ ಸಾಧನವಾಗುವುದು. ವಿಪರೀತಾರ್ಥದಿಂದ ವಿಪರೀತ ಸಾಧನ."

೭. ರಹಸ್ಯ ವಿವರಣೆಗಳು ವಿವೃತ್ತಿಯಲ್ಲಿ ಸಾಕಷ್ಟು ಸ್ಥಳಗಳಲ್ಲಿ ಇವೆ.

"ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।

ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ ॥ ಗೀತಾ ೯-೨೬ ॥

"ಹೇ ಭಗವನ್, ಇತರ ದೇವತೆಗಳಿಗಿಂತಲೂ ನೀನು ಮಹಾಮಹಿಮನಾದ್ದರಿಂದ ಇತರರಿಗಿಂತ ನಿನ್ನ ಪೂಜೆ ಶ್ರಮಸಾಧ್ಯ ಎಂದರೆ - ಇಲ್ಲವೆನ್ನುತ್ತಾನೆ ಶ್ರೀಕೃಷ್ಣ. ಯಾವ ಭಕ್ತನು ಪತ್ರ ಪುಷ್ಪ ಫಲ ಜಲಾದಿಗಳನ್ನು ಭಕ್ತಿಯಿಂದ ಕೊಡುತ್ತಾನೋ ಅವುಗಳನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ."

ಇಲ್ಲಿ ಯಾವ ಯಾವುದೋ ಪತ್ರ ಪುಷ್ಪಾದಿಗಳಿಂದ ಪೂಜೆಯನ್ನಾಗಲೀ ಫಲ ಜಲಗಳ ನಿವೇದನವನ್ನಾಗಲೀ ಮಾಡಲಾಗದು.

ವಿವೃತ್ತಿಕಾರರೆನ್ನುತ್ತಾರೆ ಅನಿಷಿದ್ಧವಾದ ಪತ್ರ ಪುಷ್ಪ ಜಲಗಳನ್ನು ಸಮರ್ಪಣೆ ಮಾಡಬೇಕೆಂದು ರಹಸ್ಯ ಸಾಧನ ವಿಷಯ.

ಇದೇ ಪ್ರಕಾರ ಇನ್ನೊಂದು ಶ್ಲೋಕವನ್ನು ನೋಡುವಾ.

"ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್ ।

ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಮ್ ॥
ಗೀತಾ ೯-೨೭ ॥
ವಿವೃತ್ತಿ : "ಹೇ ಕೌಂತೇಯ ಯತ್ತ್ವಂ ಯದ್ವಿಹಿತಂ ಕರೋಷಿ ವಿಹಿತ ಮಿತಿ ಸರ್ವತ್ರ ಅನ್ವೇಷ್ಟವ್ಯಂ । ನಿಷಿದ್ಧ ಕರಣಸ್ಯ ಪ್ರತ್ಯವಾಯಹೇತುತ್ವಾತ್ ಪಾತ್ರಾಯಚ ಯದ್ರವ್ಯಂದದಾಸಿ ತತ್ಸರ್ವಂ ಮಯಿ ಸಮರ್ಪಣಂ ಕುರುಷ್ವ ॥

ಅರ್ಥ: ಹೇ ಕೌಂತೇಯ ಯಾವ ವಿಹಿತವನ್ನು ನೀನು ಆಚರಿಸುವೆಯೋ ಅದನ್ನು ನನಗೆ ಅರ್ಪಿಸು. ವಿಹಿತವಾದ ಎಂಬುದನ್ನು ಸರ್ವತ್ರ ಅನ್ವಯ ಮಾಡಿಕೊಳ್ಳಬೇಕು. ಯಾಕೆಂದರೆ ನಿಷಿದ್ಧಾಚರಣೆಗೆ ಪಾಪಫಲ ಹೇಳಿದೆ. ಮತ್ತು ನೀನು ಸತ್ಪಾತ್ರರಿಗೆ ಕೊಟ್ಟಿದ್ದನ್ನು ಶ್ರೀಕೃಷ್ಣಾರ್ಪಣವೆಂದು ನನಗೆ ಅರ್ಪಿಸು.

ಹೀಗೆ ಸರ್ವಕರ್ಮಗಳನ್ನು ಫಲಕಾಮನಾ ತ್ಯಾಗದಿಂದ ನನಗರ್ಪಿಸಿದರೆ ಕರ್ಮದಿಂದ ವಿಮುಕ್ತನಾಗುವಿ. ಕೊನೆಗೆ ನನ್ನನ್ನು ಹೊಂದುವಿ, ಎಂದು ಶ್ರೀಕೃಷ್ಣನ ಭಾವ.

೮. ಪ್ರಕೃತ ಕೊನೆಯ ಶ್ಲೋಕದ ವ್ಯಾಖ್ಯಾನವನ್ನು ವಿವೃತ್ತಿಕಾರರಿಂದಲೇ ತಿಳಿಯುವಾ.

ಯತ್ರ ಯೋಗೇಶ್ವರಃ ಕೃಷ್ಣಃ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀ ವಿಜಯೋಭೂತಿ ಧ್ರುವಾನೀತಿರ್ಮತಿರ್ಮಮ ॥
ಗೀತಾ ೧೮ - ೭೮ ॥
ವಿವೃತ್ತಿ - ಅವತಾರಿಕಾಃ - "ಯುದ್ಧಕರಣ ನಿಶ್ಚಯಂ ಶೃತವತೋ ರಾಜ್ಞಃ ।
ಕುತ್ರ ಜಯಾದಿರಿತಿ ಹೃದ್ಗತಂ ಶಂಕಾಂ ನಿರಾಹ ಸಂಜಯ ॥ ಯತ್ರೇತಿ ॥

ಉಪದೇಶಾನಂತರ, ಅರ್ಜುನನು ಯುದ್ಧಮಾಡಲು

ನಿಶ್ಚೈಸಿದ್ದನ್ನು ಕೇಳಿದ ಧೃತರಾಷ್ಟ್ರನಿಗೆ ಯಾರಿಗೆ ಜಯವೆಂಬ ಹೃದ್ಗತ ಸಂದೇಹವನ್ನು ಪರಿಹಾರ ಮಾಡುತ್ತಾನೆ ಸಂಜಯ, ಯತ್ರೇತಿ ಶ್ಲೋಕದಿಂದ ।

ಯತ್ರ ಸೇನಾಯಾಂ = ಯಾವ ಸೇನೆಯಲ್ಲಿ, ಯೋಗೇಶ್ವರಃ ಕೃಷ್ಣಃ = ಸರ್ವೋಪಾಯವನ್ನು ಬಲ್ಲ ಸ್ವಾಮಿಯು ಇರುತ್ತಾನೋ, ತತ್ರ = ಆ ಸೈನ್ಯಕ್ಕೇನೇ , ಶ್ರೀ = ರಾಜ್ಯಲಕ್ಷ್ಮೀ, ಭೂತಿಃ ಸಂಪತ್, ನೀತಿ=ನ್ಯಾಯ, ಧ್ರುವಾ=ನಿಶ್ಚಯವೆಂದು, ಮೆಮತಿಃ ನನ್ನ ನಿಶ್ಚಿತಜ್ಞಾನವೆಂದನು. ಸಂಜಯನು ಯುದ್ಧದಲ್ಲಿ ಯಾರಿಗೆ ಜಯವೆಂದು ತನ್ನ ನಿಶ್ಚಿತ ಅಭಿಪ್ರಾಯವನ್ನು ಯುದ್ಧದ ಪ್ರಾರಂಭದಲ್ಲಿಯೇ ಧೃತರಾಷ್ಟ್ರನಿಗೆ ತಿಳಿಸಿದನು.

ವಿವೃತ್ತಿಯ ಅಂತ್ಯ ಮಂಗಳ ಶ್ಲೋಕ ಹೀಗೆ ಇದೆ:
ಇತಿ ಶ್ರೀಕೃಷ್ಣ ಗೀತಾ ಭಾಷ್ಯಾದ್ಯುಕ್ತಾರ್ಥ ಸಂಗ್ರಹಃ ।
ರಾಘವೇಂದ್ರೇಣ ಯತಿನಾ ಕೃತ ಸಜ್ಜನ ಸಂವಿದೇ ।

ಹೀಗೆ ಮಂತ್ರಾಲಯ ಶ್ರೀರಾಘವೇಂದ್ರ ತೀರ್ಥ ಗುರುಸಾರ್ವಭೌಮರು "ಗೀತಾ ವಿವೃತ್ತಿ"ಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ಭಾಷ್ಯ-ಟೀಕಾಗ್ರಂಥಗಳ ಭಾವವನ್ನು ಮನದಲ್ಲಿರಿಸಿ, ಪ್ರತಿ ಷಟ್ಕಗಳಿಗೂ ಅಧ್ಯಾಯಗಳಿಗೂ ಸಂಗತಿಯನ್ನು ತೋರಿಸಿ, ಪ್ರತಿ ಶ್ಲೋಕಕ್ಕೂ ಅವತಾರಿಕೆ ಬರೆದು, ಭಗವಂತನ ದೀರ್ಘ ಉತ್ತರಗಳಲ್ಲಿ ಅರ್ಜುನನ ಅವಾಂತರ ಆಕಾಂಕ್ಷೆಗಳನ್ನು ತೋರಿಸಿ, ಯಾವ ಶಂಕೆಗೆ ಯಾವ ಉತ್ತರವೆಂದು, ಸ್ಪಷ್ಟೀಕರಿಸಿ, ಅನೇಕ ಅಪಾತತಃ ಕಾಣುವ ಅರ್ಥಗಳಿಗೆ ಅರ್ಥಾಂತರ ಪ್ರಕಟಿಸಿ, ಅನೇಕ ಪದಗಳಿಗೆ ಶಾಸ್ತ್ರರೀತ್ಯಾ (ನಿರುಕ್ತರೀತ್ಯಾ) ವಿವರಣೆ ತೋರಿಸಿದ್ದಾರೆ. ಹರಿ ಸರ್ವೋತ್ತಮತ್ವ, ಜೀವೇಶ ಭೇದ, "ಮತ್ಪ್ರಸಾದಾತ್ತರಿಷ್ಯಸಿ" ಎಂಬುವದರಿಂದ ಜ್ಞಾನ, ಭಕ್ತಿ, ವೈರಾಗ್ಯ, ಸಾಧನಗಳಿಂದ

ಶ್ರೀಹರಿಯ ಪ್ರಸಾದದಿಂದ, ಭಗವತ್ಸಾಕ್ಷಾತ್ಕಾರ ಮೋಕ್ಷ ಲಭ್ಯವೆಂದು ಮನೋಜ್ಞವಾಗಿ ವರ್ಣಿಸಿ ಪಂಡಿತರಿಗೂ, ಪಾಮರರಿಗೂ ಅತ್ಯಂತ ಉಪಕಾರ ಮಾಡಿದ್ದಾರೆ. ಈ ಜ್ಞಾನ ದೀವಟಿಗೆಯ ಸಹಾಯದಿಂದ ಗೀತಾ ಅರ್ಥವು ಯಥಾರ್ಥವಾಗಿ ಗ್ರಹಣವಾಗುವದರಲ್ಲಿ ಸಂದೇಹವಿಲ್ಲ. ಇಂಥ ಮಹಾತ್ಮರಿಗೆ ನಮ್ಮ ಕೃತಜ್ಞತಾಭರಿತ ವಂದನೆಗಳು. ನಮ್ಮ ಈ ಅಲ್ಪ ಚಿಂತನೆಯನ್ನು ಶ್ರೀಕೃಷ್ಣನ ಚರಣ ಕಮಲಗಳಲ್ಲಿ ಅರ್ಪಿಸುವಾ.

ಓಂ ತತ್ಸತ್

॥ ಇತಿ ಮಧ್ವೇಶರಾರ್ಪಣಮಸ್ತು ॥